<u>ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಸುರಪೂರ.</u>

**ಸಿ.ಸಿ. ನಂ.342/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ದೇವರೆಡ್ಡಿ | ಪಿ.ಡಬ್ಲ್ಯೂ ಃ 3 |
| ತಂದೆ ಹೆಸರು | ಃ | ನಾಗರೆಡ್ಡಿ | ಸಿ.ಡಬ್ಲ್ಯೂ ಃ 1 |
| ವಯಸ್ಸು | ಃ | 28 ವರ್ಷ | |
| ವೃತ್ತಿ | ಃ | ಒಕ್ಕಲುತನ | |
| ವಾಸ ಸ್ಥಳ | ಃ | ಕೆಂಭಾವಿ | ದಿನಾಂಕ ಃ 27.02.2023 |

**<u>ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು.</u>**

**ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ**

ನನ್ನ ತಂದೆಯ ಹೆಸರು ನಾಗರೆಡ್ಡಿ. ಇವರು 4 ವರ್ಷಗಳ ಹಿಂದೆ ರಸ್ತೆ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ಆದರೆ ಯಾರು ಈ ಅಪಘಾತ ಮಾಡಿದರು, ಹೇಗೆ ಅಪಘಾತವಾಯಿತು ಮತ್ತು ಯಾರ ತಪ್ಪಿನಿಂದ ಅಪಘಾತವಾಯಿತು ಅಂತ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸುತ್ತಿರುವ ದೂರನ್ನು ನಿಪಿ-3 ಅಂತ, ಇದರ ಮೇಲೆ ಇರುವ ನನ್ನ ಸಹಿಯನ್ನು ನಿಪಿ-3(ಎ) ಅಂತ ಗುರುತಿಸಲಾಯಿತು. ಇದರೆ ಏನು ಬರೆದಿದೆ ಅಂತ ನನಗೆ ಗೊತ್ತಿಲ್ಲ. ಆರೋಪಿತರನ್ನು ಯಾವತ್ತು ನೋಡಿಲ್ಲ. ಈಗ ನನಗೆ ತೋರಿಸುತ್ತಿರುವ ಫೋಟೊದಲ್ಲಿ ನಾನು ಇದ್ದು ಅದನ್ನು ನಿಪಿ-1 ಅಂತ ಗುರುತಿಸಲಾಗಿದೆ.

**ಈ ಹಂತದಲ್ಲಿ ಸ.ಸ.ಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು ಮತ್ತು ಅವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.**

**ಪಾಟೀ ಸವಾಲು ಃ ಸ.ಸ.ಅ.ರವರಿಂದಃ**

ದಿನಾಂಕ 24.07.2018 ರಂದು ಮ. 2 ಗಂಟೆಗೆ ನಾವು ಮನೆಯಲ್ಲಿ ಇದ್ದಾಗ ನನ್ನ ತಂದೆಯು ಕರಡಕಲ್ ಗ್ರಾಮದಲ್ಲಿ ಬಸ್ ನಿಲ್ದಾಣದ ಕಡೆ ನಡೆದುಕೊಂಡು ಹೋಗುತ್ತಿರುವಾಗ ಗ್ರಾಮದ ನಿಂಗಪ್ಪ ಪರಸನಹಳ್ಳಿ ಇವರು ಹೊಲದ ಪಕ್ಕದಲ್ಲಿ ಆರೋಪಿ-1 ಇತನು ತನ್ನ ಮೋಟಾರ್ ಸೈಕಲನ್ನು

ಅತೀವೇಗವಾಗಿ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಹೋಗಿ ನನ್ನ ತಂದೆಗೆ ಡಿಕ್ಕಿ ಹೊಡೆಸಿ ಇದರಿಂದ ನನ್ನ ತಂದೆಗೆ ಭಾರಿ ರಕ್ತಗಾಯವಾಗಿ ಸ್ಥಳದಲ್ಲಿಯೇ ಮೃತ ಪಟ್ಟಿದ್ದಾನೆ ಎಂದು ನಿಪಿ-3 ರಂತೆ ಪೊಲೀಸರಿಗೆ ದೂರು ಕೊಟ್ಟರು ಸಹ ಆರೋಪಿತರೊಂದಿಗೆ ರಾಜಿಯಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**ಮರು ವಿಚಾರಣೆ : ಇಲ್ಲ.**

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಸುರಪೂರ.